***ದಯವಿಟ್ಟು ಪ್ರಶ್ನೆ ಪತ್ರಿಕೆಯನ್ನು ಪರೀಕ್ಷಾ ಮೇಲ್ವಿಚಾರಕರು ಸೂಚಿಸಿದ ಅನಂತರವೇ ತೆರೆಯತಕ್ಕದ್ದು.***

**ಗರಿಷ್ಠ ಅಂಕಗಳು : 100**

**ಒಟ್ಟು ಪ್ರಶ್ನೆಗಳ ಸಂಖ್ಯೆ : 50**

**ಗರಿಷ್ಠ ಸಮಯಾವಕಾಶ : 1 ಗಂಟೆ**

| ಓ.ಎಂ.ಆರ್. ಶ್ರೇಣಿ ಸಂಖ್ಯೆಯನ್ನು ನಿಗದಿತ ಅಂಕಣದಲ್ಲಿ ಬರೆಯಿರಿ |
| --- |
| |

| ಪ್ರಶ್ನೆ ಪತ್ರಿಕೆಯ ಪುಸ್ತಕದ ಈ ಕೆಳಗಿನ ಸಂಖ್ಯೆಯನ್ನು ಉತ್ತರ ಹಾಳೆಯಲ್ಲಿನ ನಿಗದಿತ ಅಂಕಣದಲ್ಲಿ ತುಂಬಿರಿ : |
| --- |
| |

## ಸೂಚನೆಗಳು

**ಪರೀಕ್ಷೆಯ ಸಮಯದಲ್ಲಿ ಮೊಬೈಲ್ ಫೋನ್ ಮತ್ತು ಕ್ಯಾಲ್ಕುಲೇಟರ್‌ಗಳನ್ನು ತರಬಾರದು. ನೀವು ಇವುಗಳನ್ನು ಪರೀಕ್ಷಾ ಕೊಠಡಿಯೊಳಗೆ ತಂದಲ್ಲಿ ನಿಮ್ಮ ಅಭ್ಯರ್ಥಿತನವನ್ನು ನೀವು ಕಳೆದುಕೊಳ್ಳುತ್ತೀರಿ.**

1. ಪ್ರಶ್ನೆ ಪತ್ರಿಕೆಯನ್ನು ತೆರೆಯುವ ಮೊದಲು ಓ.ಎಂ.ಆರ್. ಉತ್ತರ ಹಾಳೆಯ ನಿಗದಿತ ಸ್ಥಳದಲ್ಲಿ ನಿಮ್ಮ ಹೆಸರು, ನೋಂದಣಿ ಸಂಖ್ಯೆ ಮತ್ತು ಪ್ರಶ್ನೆ ಪತ್ರಿಕೆಯ ಪುಸ್ತಕದ ಸಂಖ್ಯೆಯನ್ನು ನಿಗದಿಪಡಿಸಿದ ಕಲಂಗಳಲ್ಲಿ ಭರ್ತಿ ಮಾಡುವುದು ಹಾಗೂ ನಿಮ್ಮ ಎಡಗೈ ಹೆಬ್ಬೆಟ್ಟು ಗುರುತನ್ನು ಹಾಕಿ ಸಹಿ ಮಾಡುವುದು.

2. ಎಲ್ಲಾ ಪ್ರಶ್ನೆಗಳು ಕಡ್ಡಾಯ ಮತ್ತು ಸಮಾನ ಅಂಕಗಳನ್ನು ಹೊಂದಿರುತ್ತವೆ.

3. ಪ್ರತೀ ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಇವುಗಳಲ್ಲಿ ಒಂದು ಮಾತ್ರ ಪರಿಪೂರ್ಣ ಮತ್ತು ಸರಿಯಾದುದು. ಯಾವ ಉತ್ತರ ಪರಿಪೂರ್ಣ ಮತ್ತು ಸರಿ ಎಂದು ನೀವು ಭಾವಿಸುತ್ತೀರೋ ಅದನ್ನು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ದಾಖಲಿಸಿ.

4. ಒಂದೊಮ್ಮೆ ನೀವು ಗುರುತಿಸಿದ ಒಂದೇ ಉತ್ತರವು ತಜ್ಞ ಸಮಿತಿಯ ಸರಿಯಾದ ಉತ್ತರಕ್ಕೆ ಹೊಂದಿಕೆಯಾಗುವುದಾದರೆ ಪೂರ್ಣ ಅಂಕಗಳನ್ನು ನಿಮಗೆ ನೀಡಲಾಗುವುದು.

5. ನಕಾರಾತ್ಮಕ ಅಂಕಗಳಿರುವುದಿಲ್ಲ . ಆದರೆ, ನೀವು ಒಂದಕ್ಕಿಂತ ಹೆಚ್ಚು ಉತ್ತರವನ್ನು ಒಂದು ಪ್ರಶ್ನೆಗೆ ನೀಡಿದರೆ, ಇವುಗಳನ್ನು ಮೌಲ್ಯಮಾಪನ ಮಾಡುವಾಗ ತಪ್ಪು ಆಯ್ಕೆ ಎಂದು ಪರಿಗಣಿಸಿ, ಆ ಪ್ರಶ್ನೆಗೆ ಶೂನ್ಯ ಅಂಕವನ್ನು ನೀಡಲಾಗುವುದು.

6. ಪ್ರಶ್ನೆ ಪತ್ರಿಕೆಯ ಹಿಂದಿನ ಪುಟದ ಖಾಲಿ ಜಾಗವನ್ನು ನಿಮ್ಮ ಕರಡು ಕೆಲಸಕ್ಕೆ ಉಪಯೋಗಿಸಬಹುದು.

7. ಪ್ರಶ್ನೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನೀಡಲಾಗಿದೆ. ಆದರೆ ಇವೆರಡರ ಮಧ್ಯೆ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ, ಆಂಗ್ಲ ಭಾಷೆಯ ಪ್ರಶ್ನೆಯನ್ನು ಸರಿಯಾದ ಪ್ರಶ್ನೆಯೆಂದು ಪರಿಗಣಿಸಿ.

8. ಉತ್ತರಗಳನ್ನು ಗುರುತಿಸುವುದಕ್ಕೆ ನೀಲಿ ಅಥವಾ ಕಪ್ಪು ಬಣ್ಣದ ಬಾಲ್ ಪೆನ್ನನ್ನು ಉಪಯೋಗಿಸಿ.

9. ಆದ್ದರಿಂದ ಮುಂದುವರೆಯಿರಿ. ನಿಮಗೆ ಒಳ್ಳೆಯ ಅದೃಷ್ಟ ಲಭಿಸಲಿ.

**ಪು.ತಿ.ನೋ.**

ಕಚ್ಚಾ ಬರಹಕ್ಕಾಗಿ ಸ್ಥಳ

1. $\left(-\frac{2}{3}\right)$ ರ ಘನ = ?

(A) $\frac{8}{27}$ (B) $\frac{8}{9}$ (C) $-\frac{8}{27}$ (D) ಇವುಗಳಲ್ಲಿ ಯಾವುದೂ ಅಲ್ಲ

2. ಪ್ರತಿ ಗಂಟೆಗೆ 90 ಕಿಲೋ ಮೀಟರ್ ವೇಗ ಅಂದರೆ

(A) ಪ್ರತಿ ಸೆಕುಂಡಿಗೆ 0.25 ಮೀಟರ್ (B) ಪ್ರತಿ ಸೆಕುಂಡಿಗೆ 2.5 ಮೀಟರ್

(C) ಪ್ರತಿ ಸೆಕುಂಡಿಗೆ 25 ಮೀಟರ್ (D) ಇವುಗಳಲ್ಲಿ ಯಾವುದೂ ಅಲ್ಲ

3. ಒಂದು ವೃತ್ತದ ಪರಿಧಿ 44 ಸೆ.ಮೀ. ಆಗಿದೆ. $\pi = \frac{22}{7}$ ಆದರೆ ಆ ವೃತ್ತದ ವಿಸ್ತೀರ್ಣ = ?

(A) 98 $\pi$ ಚದರ ಸೆ.ಮೀ. (B) 49 $\pi$ ಚದರ ಸೆ.ಮೀ.

(C) 7 $\pi$ ಚದರ ಸೆ.ಮೀ. (D) ಇವುಗಳಲ್ಲಿ ಯಾವುದೂ ಅಲ್ಲ

4. $16 \times 0.002 =$

(A) 32 (B) 3.20 (C) 0.32 (D) ಇವುಗಳಲ್ಲಿ ಯಾವುದೂ ಅಲ್ಲ

5. $\frac{3}{5}$, $\frac{5}{7}$ ಮತ್ತು $\frac{13}{15}$ ಗಳಲ್ಲಿ ಯಾವುದರ ಸಂಖ್ಯಾತ್ಮಕ ಮೌಲ್ಯ ಅತೀ ಹೆಚ್ಚು?

(A) $\frac{3}{5}$ (B) $\frac{5}{7}$

(C) $\frac{13}{15}$ (D) ಇವುಗಳಲ್ಲಿ ಯಾವುದೂ ಅಲ್ಲ ಏಕೆಂದರೆ ಇವೆಲ್ಲ ಸಮ

6. ಪ್ರತಿ ಬದಿಯ ಉದ್ದ 7 ಸೆ.ಮೀ. ಇರುವ ಘನಾಕೃತಿಯ ಪೆಟ್ಟಿಗೆಯ ಒಟ್ಟು ಹೊರಮೈ ವಿಸ್ತೀರ್ಣ ?

(A) 294 ಚ. ಸೆ.ಮೀ. (B) 343 ಚ. ಸೆ.ಮೀ. (C) 392 ಚ. ಸೆ.ಮೀ. (D) ಇವುಗಳಲ್ಲಿ ಯಾವುದೂ ಅಲ್ಲ

7. $\{3.000 + 1.021 - 0.933\} =$

(A) 3.808 (B) 3.088 (C) 3.888 (D) ಇವುಗಳಲ್ಲಿ ಯಾವುದೂ ಅಲ್ಲ

8. ಗಂಧದ ಮರದ ಪುಡಿಯು 3:8 ರ ಅನುಪಾತದಲ್ಲಿ ಚೇಗು ಮತ್ತು ಬಿಳಿ ಬಣ್ಣದ ಮರದ ಪುಡಿಯನ್ನೊಳಗೊಂಡಿದೆ. 440 ಕಿ. ಗ್ರಾಂ ನಷ್ಟು ಗಂಧದ ಮರದ ಪುಡಿಯಲ್ಲಿ ಚೇಗುವಿನ ತೂಕ ?

(A) 120 ಕಿ.ಗ್ರಾಂ (B) 320 ಕಿ.ಗ್ರಾಂ (C) 48.4 ಕಿ.ಗ್ರಾಂ (D) ಇವುಗಳಲ್ಲಿ ಯಾವುದೂ ಅಲ್ಲ

9. ಬೀಟೆ ಮರದ ಕಟ್ಟಿಗೆ ಬೆಲೆ ತೇಗದ ಮರದ ಕಟ್ಟಿಗೆಗಿಂತ 12% ಹೆಚ್ಚು ಇದೆ. ಪ್ರತಿ ಘನ ಅಡಿ ತೇಗದ ಮರದ ಬೆಲೆ ರೂ. 1,300 ಆದರೆ, ಬೀಟೆ ಮರದ ಬೆಲೆ ?

(A) ಪ್ರತಿ ಘನ ಅಡಿಗೆ ರೂ. 1,312 (B) ಪ್ರತಿ ಘನ ಅಡಿಗೆ ರೂ. 1,456

(C) ಪ್ರತಿ ಘನ ಅಡಿಗೆ ರೂ. 1,412 (D) ಇವುಗಳಲ್ಲಿ ಯಾವುದೂ ಅಲ್ಲ

10. 8% ಸರಳ ಬಡ್ಡಿ ದರದಲ್ಲಿ 3 ವರ್ಷಗಳ ಅವಧಿಗೆ ಒಂದು ಬ್ಯಾಂಕಿನಲ್ಲಿ ರೂ. 8,000 ತೊಡಗಿಸಿದ್ದೇನೆ. ನನ್ನ ಹೂಡಿಕೆಯ ವಾಯಿದೆ ತುಂಬಿರುವ ಮೌಲ್ಯ ರೂಪಾಯಿಗಳಲ್ಲಿ ?
(A) 8,640 (B) 9,280 (C) 9,920 (D) ಇವುಗಳಲ್ಲಿ ಯಾವುದೂ ಅಲ್ಲ

11. ಹಿಂದೆ, ಬನವಾಸಿಯು ಯಾವ ರಾಜವಂಶದ/ಸಂತತಿಯ ರಾಜಧಾನಿಯಾಗಿತ್ತು ?
(A) ಚಾಲುಕ್ಯ (B) ಕದಂಬ (C) ರಾಷ್ಟ್ರಕೂಟ (D) ಇವುಗಳಲ್ಲಿ ಯಾವುದೂ ಅಲ್ಲ

12. 2011 ರ ನಂತರದ ಭಾಗದಲ್ಲಿ ಯಾವ ವರ್ಗದ (ಮೌಲ್ಯದ) ನಾಣ್ಯವನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳಲಾಯಿತು ?
(A) ಐದು ಪೈಸೆ (B) ಇಪ್ಪತ್ತು ಪೈಸೆ (C) ಇಪ್ಪತ್ತೈದು ಪೈಸೆ (D) ಇವುಗಳಲ್ಲಿ ಯಾವುದೂ ಅಲ್ಲ

13. ಅರಣ್ಯ ಡಕಾಯಿತ ವೀರಪ್ಪನ್, ಕೊಳ್ಳೆಗಾಲದ ಯಾವ ಹಳ್ಳಿಗೆ ಸೇರಿದವ ?
(A) ಪರ್ಸೆ ಗೌಡನ್ ಪಾಳ್ಯ (B) ಅಲಂಬಾಡಿ
(C) ಗೋಪಿನಾಥಮ್ (D) ಇವುಗಳಲ್ಲಿ ಯಾವುದೂ ಅಲ್ಲ

14. ಸೆಪ್ಟೆಂಬರ್ 2011ರಲ್ಲಿ ವಿಧಾನ ಸಭೆಯ ಒಂದು ಸ್ಥಾನಕ್ಕೆ ಕರ್ನಾಟಕದ ಯಾವ ಜಿಲ್ಲೆಯಲ್ಲಿ ಚುನಾವಣೆ ನಡೆಯಿತು ?
(A) ಕೊಪ್ಪಳ (B) ಕೊಪ್ಪ
(C) ಕೊಳ್ಳೆಗಾಲ (D) ಇವುಗಳಲ್ಲಿ ಯಾವುದೂ ಅಲ್ಲ

15. ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಯಾವ ಜಿಲ್ಲೆ ಅತ್ಯಂತ ಉತ್ತರದಲ್ಲಿದೆ ?
(A) ಉತ್ತರ ಕನ್ನಡ
(B) ಚಿಕ್ಕಮಗಳೂರು
(C) ಮೈಸೂರು
(D) ಎಲ್ಲವೂ ಸಮಾನ ಉತ್ತರದಲ್ಲಿರುವುದರಿಂದ ಇವುಗಳಲ್ಲಿ ಯಾವುದೂ ಅಲ್ಲ

16. ಕರ್ನಾಟಕದಲ್ಲಿ ತೀರ ಇತ್ತೀಚೆಗೆ ಸೃಷ್ಟಿಯಾದ ಜಿಲ್ಲೆ ಯಾವುದು ?
(A) ಯಾದ್‌ಗೀರ್ (B) ರಾಮನಗರಮ್ (C) ಚಾಮರಾಜನಗರ (D) ಇವುಗಳಲ್ಲಿ ಯಾವುದೂ ಅಲ್ಲ

17. ಕರ್ನಾಟಕ ಸರಕಾರದಿಂದ, ನ್ಯಾಯ ಬೆಲೆ ಅಂಗಡಿಗಳ ಮೂಲಕ ಕೆಳಗಿನವುಗಳಲ್ಲಿ ಯಾವುದು ಮಾರಾಟವಾಗುತ್ತಿಲ್ಲ ?
(A) ಸೀಮೆಎಣ್ಣೆ (B) ಸಕ್ಕರೆ (C) ರಾಗಿ (D) ಇವುಗಳಲ್ಲಿ ಯಾವುದೂ ಅಲ್ಲ

18. ಸಮುದ್ರವನ್ನು ತನ್ನ ಒಂದು ಗಡಿಯಾಗಿ ಉತ್ತರ ಕನ್ನಡ ಜಿಲ್ಲೆಯ ಎಷ್ಟು ತಾಲೂಕುಗಳು ಹೊಂದಿವೆ ?
(A) ಐದು (B) ಆರು (C) ಏಳು (D) ಇವುಗಳಲ್ಲಿ ಯಾವುದೂ ಅಲ್ಲ

19. ಚಾಮರಾಜನಗರದ ಅತ್ಯಂತ ಸಣ್ಣ ತಾಲೂಕು ಯಾವುದು ?
(A) ಚಾಮರಾಜನಗರ (B) ಎಲ್ಲಂದೂರ್ (C) ಗುಂಡ್ಲುಪೇಟೆ (D) ಇವುಗಳಲ್ಲಿ ಯಾವುದೂ ಅಲ್ಲ

20. ಇತ್ತೀಚಿನ ಹಿಂದೆ 1947 ರ ತನಕ ಚಿಕ್ಕಮಗಳೂರು ಜಿಲ್ಲೆಯನ್ನು ಯಾವ ಹೆಸರಿನಲ್ಲಿ ಕರೆಯಲಾಗುತ್ತಿತ್ತು ?
(A) ಕಡೂರು (B) ಬೀರೂರು (C) ಸಕ್ರೆಪಟ್ಣ (D) ಇವುಗಳಲ್ಲಿ ಯಾವುದೂ ಅಲ್ಲ

21. ಯಾರ ನಿವಾಸ ಸ್ಥಾನವಾದುದರಿಂದ ಮೈಸೂರು ಜಿಲ್ಲೆಗೆ ಆ ಹೆಸರು ಬಂತು ?
(A) ಮಹೇಶ ದೇವರ (B) ದೈತ್ಯ ಮಾರೀಚ
(C) ದೈತ್ಯ ಮಹಿಷಾಸುರ (D) ಇದರಲ್ಲಿ ಯಾರೂ ಅಲ್ಲ

22. ಹತ್ತಿಯಲ್ಲಿ, ಅದರ ಹೂಗಳ ಬಣ್ಣಗಳು ಬದಲಾಗುತ್ತವೆ. ಆ ಹೂಗಳಿಗಿರುವ ಬಣ್ಣಗಳು ಸುಮಾರಾಗಿ ಯಾವುವು ?

(A) ನಸು ಹಳದಿ ಮತ್ತು ಕೆಂಪು (B) ಕೆಂಪು ಮತ್ತು ನೀಲ

(C) ನೀಲ ಮತ್ತು ನಸುಗೆಂಪು (ಪಿಂಕ್) (D) ಇವುಗಳಲ್ಲಿ ಯಾವುದೂ ಅಲ್ಲ

23. ಬಾಬಾ ಬುಡನ್‌ಗಿರಿ ಬೆಟ್ಟಗಳು ಯಾವ ಜಿಲ್ಲೆಯಲ್ಲಿವೆ ?

(A) ಶಿವಮೊಗ್ಗ (B) ಚಿಕ್ಕಮಗಳೂರು (C) ಹಾಸನ (D) ಇವುಗಳಲ್ಲಿ ಯಾವುದೂ ಅಲ್ಲ

24. ಕೆಳಗಿನವುಗಳಲ್ಲಿ ಯಾವ ಬುಡಕಟ್ಟಿನವರು ಮೈಸೂರು ಜಿಲ್ಲೆಯಲ್ಲಿ ಸಾಮಾನ್ಯವಾಗಿ ಅತ್ಯಂತ ಕಡಿಮೆ ಕಾಣಸಿಗುತ್ತಾರೆ ?

(A) ಗೌಳಿ (B) ಕಾಡು ಕುರುಬ

(C) ಜೇನು ಕುರುಬ (D) ಇವುಗಳಲ್ಲಿ ಯಾವುದೂ ಅಲ್ಲ

25. ಕರ್ನಾಟಕದಲ್ಲಿ, ಮಂಗಳೂರಿನಂತಹ ಅತಿ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿನ ಕಪ್ಪು ಹತ್ತಿ ಮಣ್ಣು ಯಾವ ಬೆಳೆ ಬೆಳೆಯುವುದಕ್ಕೆ ಆಸ್ಪದ ನೀಡುವುದಿಲ್ಲ ?

(A) ಭತ್ತ (B) ಹತ್ತಿ

(C) ಜೋಳ (D) ಇವುಗಳಲ್ಲಿ ಯಾವುದೂ ಅಲ್ಲ

26. ಅರಣ್ಯ ವೀಕ್ಷಕನು ತನ್ನ ವೇತನವನ್ನು ಕ್ರಮ ಸಂಖ್ಯೆ B 121454 ರಿಂದ B 121498 ರವರೆಗಿನ ರೂಪಾಯಿ 100 ರ ನೋಟುಗಳಲ್ಲಿ ಪಡೆದರೆ, ಅವನು ಪಡೆದ ರೂಪಾಯಿ ನೂರರ ನೋಟುಗಳೆಷ್ಟು ?

(A) 44 (B) 45 (C) 43 (D) ಇವುಗಳಲ್ಲಿ ಯಾವುದೂ ಅಲ್ಲ

27. ಕರ್ನಾಟಕದಲ್ಲಿ 'ಮಕನ' ಎಂದು ಉಲ್ಲೇಖಿಸಲ್ಪಡುವ ಆನೆಯ ಸರಿಯಾದ ವರ್ಣನೆ ಯಾವುದು ?

(A) ದಾಡೆಗಳಿರುವ ಹೆಣ್ಣಾನೆ

(B) ದಾಡೆಗಳಿರದ ಗಂಡಾನೆ

(C) ಪೂರ್ಣ ಗಂಡೂ ಅಲ್ಲದ ಪೂರ್ಣ ಹೆಣ್ಣೂ ಅಲ್ಲದ ಆನೆ

(D) ಇವುಗಳಲ್ಲಿ ಯಾವುದೂ ಅಲ್ಲ

28. ಸುಮಾರು 80 ವರ್ಷಗಳಷ್ಟು ಪ್ರಾಯವಾಗಿರುವ ಹಳೆಯ ಮರಗಳಲ್ಲಿ, ಕೆಳಗಿನ ಜಾತಿಗಳಲ್ಲಿ ಯಾವುದರ ತೊಗಟೆ ಅತಿ ಕಡಿಮೆ ಇರುತ್ತದೆ ?

(A) ನೀಲಗಿರಿ (B) ಮತ್ತಿ (C) ಹುಣಸೆ (D) ಇವುಗಳಲ್ಲಿ ಯಾವುದೂ ಅಲ್ಲ

29. ಕೆಳಗಿನ ಪ್ರಾಣಿಗಳಲ್ಲಿ ಯಾವುದರ ನಿವಾಸ ಸ್ಥಾನ ಕರ್ನಾಟಕ ಅಲ್ಲ ?

(A) ತೋಳ (B) ಸಾಂಭಾರ್ (C) ಸಿಂಹ (D) ಇವುಗಳಲ್ಲಿ ಯಾವುದೂ ಅಲ್ಲ

30. ಕೆಳಗಿನವುಗಳಲ್ಲಿ ಯಾವುದನ್ನು ಕಡಿದಾಗ, ಕಡಿದ ಸ್ಥಳದಲ್ಲಿ ಬಿಳಿ ಅಂಟುದ್ರವ ಹೊರಬರುವ ಸಂಭವ ಬಹುಮಟ್ಟಿಗೆ ಇಲ್ಲ ?

(A) ನೆಲ್ಲಿ ಮರದ ತೊಗಟೆ ಕಡಿದಾಗ/ಕತ್ತರಿಸಿದಾಗ

(B) ಹಲಸಿನ ಹಣ್ಣನ್ನು ಕೊಯಿದು ತೆರೆದಾಗ

(C) ಆಲದ ಮರದ ಮುಖ್ಯ ಕಾಂಡವನ್ನು ಕಡಿದಾಗ

(D) ಇವುಗಳಲ್ಲಿ ಯಾವುದೂ ಅಲ್ಲ

31. ರಾಷ್ಟ್ರೀಯ ಹೆದ್ದಾರಿ ಮೇಲಿನ ಮೈಲುಕಲ್ಲುಗಳನ್ನು (ವಾಸ್ತವವಾಗಿ ಕಿ.ಮೀ. ಕಲ್ಲು) ಯಾವ ಬಣ್ಣದಲ್ಲಿ ಪೈಂಟ್ ಮಾಡಿದ್ದಾರೆ ?

(A) ಕಂದು (B) ಹಳದಿ (C) ಹಸಿರು (D) ಇವುಗಳಲ್ಲಿ ಯಾವುದೂ ಅಲ್ಲ

32. ಕಾಡಿನ ಮರವಾದ  ಮುತ್ತುಗದ ಹೂಗಳ ಬಣ್ಣ ಯಾವುದು ?

(A) ಬೆಂಕಿ ಕೆಂಪು (B) ಆಕಾಶ ನೀಲಿ (C) ಹಾಲಿನ ಬಿಳಿ (D) ಇವುಗಳಲ್ಲಿ ಯಾವುದೂ ಅಲ್ಲ

33. ಕೆಳಗಿನವುಗಳಲ್ಲಿ ಯಾವ ಜಾತಿಯ ಮರಗಳು ವರ್ಷದಲ್ಲಿ ಎರಡು ಬಾರಿ ಹೂ ಬಿಡುತ್ತವೆ ಮತ್ತು ಹಣ್ಣು ಕೊಡುತ್ತವೆ ?

(A) ಬೀಟೆ ಮರ
(B) ಶ್ರೀ ಗಂಧದ ಮರ
(C) ಮಾವು
(D) ಇವುಗಳಲ್ಲಿ ಯಾವುದೂ ಅಲ್ಲ

34. ಕೆಳಗಿನವುಗಳಲ್ಲಿ ಯಾವುದು ಕರ್ನಾಟಕದ ನೃತ್ಯ ರೂಪ ಅಲ್ಲ ?

(A) ಯಕ್ಷಗಾನ (B) ಮೋಹಿನಿ ಅಟ್ಟಂ (C) ಡೊಳ್ಳು ಕುಣಿತ (D) ಇವುಗಳಲ್ಲಿ ಯಾವುದೂ ಅಲ್ಲ

35. ಹೈದರಾಲಿಯ ಸೈನ್ಯ ಬಲದೊಡನೆ ಏಕಾಂಗಿಯಾಗಿ ಹೋರಾಡಿದ ಚಿತ್ರದುರ್ಗದ ಮಹಿಳೆ ಒನಕೆ ಓಬವ್ವ, ಹೋರಾಟಕ್ಕೆ ಉಪಯೋಗಿಸಿದ್ದು ಯಾವುದನ್ನು ?

(A) ಈಟಿ
(B) ಖಡ್ಗ
(C) ಬಿಲ್ಲು ಮತ್ತು ಬಾಣ
(D) ಇವುಗಳಲ್ಲಿ ಯಾವುದೂ ಅಲ್ಲ

36. ಮಹಾತ್ಮ ಗಾಂಧಿ ಅಲ್ಲದೆ, ಅಕ್ಟೋಬರ್ 2 ರಂದು ಜನಿಸಿದ ಇನ್ನೊಬ್ಬ ಭಾರತದ ಪ್ರಸಿದ್ಧ ಮುಖಂಡ ಯಾರು ?

(A) ಶ್ರೀ ರಾಜೀವ್ ಗಾಂಧಿ
(B) ಶ್ರೀಮತಿ ಇಂದಿರಾ ಗಾಂಧಿ
(C) ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ
(D) ಇವರಲ್ಲಿ ಯಾರೂ ಅಲ್ಲ

37. ತನ್ನ ಗೂಡನ್ನು ತಾನೇ ಮಾಡದೆ, ಇತರ ಹಕ್ಕಿಗಳು ಕಟ್ಟಿದ ಗೂಡಿನಲ್ಲಿ ಮೊಟ್ಟೆಗಳನ್ನಿಡುವ ಪಕ್ಷಿ ಯಾವುದು ?

(A) ಕೋಗಿಲೆ
(B) ಕಾಗೆ
(C) ಮೈನಾ
(D) ಇವುಗಳಲ್ಲಿ ಯಾವುದೂ ಅಲ್ಲ

38. ಗಿಳಿಯ ಗೂಡು ____________ ಆಗಿದೆ.

(A) ಎರಡು  ಬಂಡೆಗಳ ಅಥವಾ ಕಟ್ಟಡಗಳ ನಡುವಿನ ಎಡೆ
(B) ಎಲೆಗಳು ಮತ್ತು ಮುಳ್ಳುಗಳಿಂದ ಮಾಡಲಾದ ಒಂದು ರಚನೆ
(C) ಮರದಲ್ಲಿನ  ಒಂದು ತೂತು
(D) ಇವುಗಳಲ್ಲಿ ಯಾವುದೂ ಅಲ್ಲ

39. ಕರ್ನಾಟಕದಲ್ಲಿ, ತಹಸೀಲ್ದಾರರು _____________ ಆಗಿಯೂ ಕಾರ್ಯನಿರ್ವಹಿಸುತ್ತಾರೆ. (ಅವರ ಅಧಿಕೃತ ವಾಹನವು, ಸಂಖ್ಯಾ ಫಲಕದ ಬಳಿ ಈ ಹೆಸರನ್ನು ಆಗಾಗ ಹೊಂದಿರುತ್ತದೆ )

(A) ತಾಲೂಕು ಮ್ಯಾಜಿಸ್ಟ್ರೇಟ್
(B) ನ್ಯಾಯಿಕ ಮ್ಯಾಜಿಸ್ಟ್ರೇಟ್
(C) ಭೂ ದಾಖಲೆಗಳ ಉಪನಿರ್ದೇಶಕ
(D) ಇವುಗಳಲ್ಲಿ ಯಾವುದೂ ಅಲ್ಲ

40. ಕೆಳಗಿನ ಹೇಳಿಕೆಗಳಲ್ಲಿ  ಯಾವುದು ಸರಿ ?

(A) ಬೀದರ್‌ಗಿಂತ ಮೊದಲು ಉಡುಪಿಯಲ್ಲಿ  ಸೂರ್ಯೋದಯವಾಗುತ್ತದೆ
(B) ಉಡುಪಿಗಿಂತ ಮೊದಲು ಬೀದರ್‌ನಲ್ಲಿ  ಸೂರ್ಯೋದಯವಾಗುತ್ತದೆ
(C) ಬೀದರ್ ಮತ್ತು ಉಡುಪಿಗಳಲ್ಲಿ ಸೂರ್ಯೋದಯ ಏಕಕಾಲದಲ್ಲಿ ಆಗುತ್ತದೆ
(D) ಇವುಗಳಲ್ಲಿ ಯಾವುದೂ ಅಲ್ಲ

41. ಮೈಸೂರು ಪೇಪರ್ ಮಿಲ್ಸ್ ಉದ್ಯಮ ಎಲ್ಲಿದೆ ?

(A) ಮೈಸೂರು ಜಿಲ್ಲೆ
(B) ಶಿವಮೊಗ್ಗ ಜಿಲ್ಲೆ
(C) ಚಾಮರಾಜನಗರ ಜಿಲ್ಲೆ
(D) ಇವುಗಳಲ್ಲಿ ಯಾವುದೂ ಅಲ್ಲ

42. ಕರ್ನಾಟಕದ ಲೋಕಾಯುಕ್ತ ಯಾರು ?

(A) ನ್ಯಾಯಮೂರ್ತಿ ಸಂತೋಷ ಹೆಗ್ಡೆ
(B) ನ್ಯಾಯಮೂರ್ತಿ ಶಿವರಾಜ್ ಪಾಟೀಲ್
(C) ನ್ಯಾಯಮೂರ್ತಿ ವೆಂಕಟಾಚಲ
(D) ಇವರಲ್ಲಿ ಯಾರೂ ಅಲ್ಲ

43. ಕರ್ನಾಟಕದ ಎಲ್ಲ ಸ್ಥಳಗಳ/ಅಂಚೆ ಕಚೇರಿಗಳ PIN (ಪೋಸ್ಟಲ್ ಇಂಡೆಕ್ಸ್ ನಂಬರ್) ಸಂಕೇತಗಳು ಯಾವ ಸಂಖ್ಯೆಯಿಂದ ಪ್ರಾರಂಭವಾಗುತ್ತದೆ ?

(A) 7
(B) 6
(C) 5
(D) ಇವುಗಳಲ್ಲಿ ಯಾವುದೂ ಅಲ್ಲ

44. ಭಾರತದ ರಾಷ್ಟ್ರಧ್ವಜದ ಕುರಿತು ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ ?

(A) ಕೇಸರಿ ಬಣ್ಣವು ಹಸಿರಿನ ಮೇಲಿದೆ
(B) ಹಸಿರು ಬಣ್ಣವು ಕೇಸರಿಯ ಮೇಲಿದೆ
(C) ಮಧ್ಯದಲ್ಲಿನ ಅಶೋಕ ಚಕ್ರದಲ್ಲಿ 27 ಅರೆಗಳಿವೆ
(D) ಇವುಗಳಲ್ಲಿ ಯಾವುದೂ ಅಲ್ಲ

45. ''ಮೈಸೂರಿನ ಹುಲಿ'' ಟಿಪ್ಪು ಸುಲ್ತಾನ್ 1799ರಲ್ಲಿ ಶ್ರೀರಂಗ ಪಟ್ಟಣದಲ್ಲಿ ಬ್ರಿಟಿಷ್ ವಿರುದ್ಧ ಹೋರಾಟದಲ್ಲಿ ತೀರಿಕೊಂಡರು. ಶ್ರೀರಂಗ ಪಟ್ಟಣ ಯಾವ ಜಿಲ್ಲೆಯಲ್ಲಿದೆ ?

(A) ಮೈಸೂರು
(B) ಹಾಸನ
(C) ಮಂಡ್ಯ
(D) ಇವುಗಳಲ್ಲಿ ಯಾವುದೂ ಅಲ್ಲ

46. ಚೆನ್ನಪಟ್ಣ ಪಟ್ಟಣವು ಯಾವ ಗೃಹ ಕೈಗಾರಿಕಾ ಉತ್ಪನ್ನಕ್ಕೆ ಹೆಸರುವಾಸಿಯಾಗಿದೆ ?

(A) ಮರದ ಬೊಂಬೆಗಳ
(B) ಆಭರಣಗಳು
(C) ತೈಲ ಚಿತ್ರಗಳು
(D) ಇವುಗಳಲ್ಲಿ ಯಾವುದೂ ಅಲ್ಲ

47. ಕರ್ನಾಟಕದಲ್ಲಿ ಈಗ ಚಿನ್ನದ ಗಣಿಗಾರಿಕೆ ಎಲ್ಲಿ ನಡೆಯುತ್ತದೆ ?

(A) ಕೊಪ್ಪಳ ಜಿಲ್ಲೆ
(B) ರಾಯಚೂರು ಜಿಲ್ಲೆ
(C) ಗದಗ ಜಿಲ್ಲೆ
(D) ಇವುಗಳಲ್ಲಿ ಯಾವುದೂ ಅಲ್ಲ

48. ಕರ್ನಾಟಕದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೊಂದಾದ ಆಗುಂಬೆ ಎಲ್ಲಿದೆ ?

(A) ಉಡುಪಿ ಜಿಲ್ಲೆ
(B) ಶಿವಮೊಗ್ಗ ಜಿಲ್ಲೆ
(C) ಚಿಕ್ಕಮಗಳೂರು ಜಿಲ್ಲೆ
(D) ಇವುಗಳಲ್ಲಿ ಯಾವುದೂ ಅಲ್ಲ

49. ಕೆಳಗಿನವುಗಳಲ್ಲಿ ಯಾವುದು, ಕರ್ನಾಟಕದ ಪಕ್ಷಿ / ಸಸ್ತನಿ ಸಾಮಾನ್ಯವಾಗಿ ರಾತ್ರಿ ಸಂಚಾರಿ/ರಾತ್ರಿ ಚಟುವಟಿಕೆಯದ್ದಲ್ಲ ?

(A) ಬಾವಲಿ
(B) ಗೂಬೆ
(C) ರಣ ಹದ್ದು
(D) ಇವುಗಳಲ್ಲಿ ಯಾವುದೂ ಅಲ್ಲ

50. ಕರ್ನಾಟಕದ ಈ ಜಿಲ್ಲೆಯ ಅಪೂರ್ವ ವಿಷಯವೇನೆಂದರೆ ಇದರ ಮೂಲಕ ಯಾವ ರೈಲುಗಾಡಿಯೂ ಹಾದು ಹೋಗುವುದಿಲ್ಲ. ಇದು ಯಾವ ಜಿಲ್ಲೆ ?

(A) ಬಾಗಲಕೋಟೆ
(B) ಉತ್ತರ ಕನ್ನಡ
(C) ಮಡಿಕೇರಿ
(D) ಇವುಗಳಲ್ಲಿ ಯಾವುದೂ ಅಲ್ಲ

ಕಚ್ಚಾ ಬರಹಕ್ಕಾಗಿ ಸ್ಥಳ